# ಶಂಖಾಭರಣ!



ಸಮುದ್ರದಲ್ಲಿ ಸಿಗುವ ಶಂಖದಿಂದ ದೇವರ ಪೂಜೆ ಮಾಡುವುದು ಎಲ್ಲರಿಗೂ ಗೊತ್ತು. ಈ ಶಂಖ ಬಳಸಿ ವೈವಿಧ್ಯಮಯ ಆಭರಣಗಳನ್ನೂ ತಯಾರಿಸಬಹುದು. ಬಳೆಗಳು, ಹಾರ, ನೆಕ್ಲೇಸ್ ಮುಂತಾದವು ಫ್ಯಾಷನ್‌ಪ್ರಿಯರ ಮೆಚ್ಚು ಕೂಡ ಆಗಿದ್ದು, ಹೊಸ ಟ್ರೆಂಡ್ ಅನ್ನೇ ಸೃಷ್ಟಿಸಿವೆ. ಒರಿಸ್ಸಾದಲ್ಲಿದ್ದ ಈ ಶಂಖಾಭರಣಗಳು ಇದೀಗ ಇಲ್ಲೂ ಮನೆಮಾತಾಗಿವೆ.

■ ಕೃಷ್ಣವೇಣಿ ಪ್ರಸಾದ್ ಮುಳಿಯ

■ ಚಿತ್ರಕೃಪೆ: ಮುಳಿಯ ಕೇಶವ ಭಟ್ ಅಂಡ್ ಸನ್ಸ್

ಇದುವರೆಗೆ ಕೃತಕ ಆಭರಣವಾಗಿ ಮಾತ್ರ ಫ್ಯಾಷನ್ ಪ್ರಪಂಚದಲ್ಲಿ ಮೆರೆಯುತ್ತಿದ್ದ ಶಂಖಗಳು ಇದೀಗ ಚೆನ್ನದ ಆಭರಣವಾಗಿಯೂ ಶೋಭಿಸುತ್ತಿವೆ. ಶಂಖವನ್ನು ಬಳಸಿ ತಯಾರಿಸಿದ ಬಳೆಗಳು ನೋಡಲು ಬಹಳ ಸುಂದರವಾಗಿರುತ್ತವೆ. ಧರಿಸಿದರೆ ವಿಶಿಷ್ಟ ಲುಕ್ ಅನ್ನೇ ಕೊಡುತ್ತವೆ. ಫ್ಯಾಷನ್‌ಪ್ರಪಂಚದಲ್ಲಿ ಹೊಸದಾಗಿ ಲಗ್ಗೆ ಇಟ್ಟ ಈ ಶಂಖಾಭರಣಗಳು ಮಹಿಳೆಯರನ್ನು ಸೆಳೆಯುತ್ತಿರುವುದು ಹೇಗೆ?

ಹೌದು. ಭಾರತ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಸುಂದರ ರಾಷ್ಟ್ರ. ನಾಟ್ಯ, ನರ್ತನ, ಯಕ್ಷಗಾನ ಬಯಲಾಟ, ಸಂಗೀತ ಶಾಸ್ತ್ರ ಯಾವುದೇ ಇರಲಿ ಅದು ಭಾರತದಿಂದಲೇ ಪ್ರಾರಂಭವಾಗಿ ಇಡೀ

